**ಪರಿಚಯ ಪತ್ರ** **ಪಿ.ಶೇಷಾದ್ರಿ**

ಪಿ. ಶೇಷಾದ್ರಿ ಹುಟ್ಟಿದ್ದು ನವೆಂಬರ್ **23, 1963** ರಂದು ತುಮಕೂರು ಜಿಲ್ಲೆಯ ದಂಡಿನಶಿವರದಲ್ಲಿ. ತಂದೆ ಸ್ಕೂಲ್ ಮೇಷ್ಟ್ರು, ಡಿ.ಸಿ.ಪಟ್ಟಾಭಿರಾಮಯ್ಯ, ತಾಯಿ ಕಮಲಮ್ಮ. ನಾಲ್ವರು ಮಕ್ಕಳಲ್ಲಿ ಇವರೇ ಕಿರಿಯರು. ಚಿಕ್ಕಂದಿನಿಂದಲೇ ಕನ್ನಡ ಸಾಹಿತ್ಯದಲ್ಲಿ ಅತೀವ ಆಸಕ್ತಿಯನ್ನು ಹೊಂದಿದ್ದ ಇವರು ನಂತರ, ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ. ಸ್ನಾತಕೋತ್ತರ ಪದವಿಯನ್ನು ಪಡೆದರು. 1985ನೇ ಇಸವಿಯಲ್ಲಿ ಬೆಂಗಳೂರಿಗೆ ಬಂದು ಚಿತ್ರಕಲಾವಿದ ಹಾಗೂ ಪತ್ರಕರ್ತರಾಗಿತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1990 ನೇ ಇಸವಿಯಲ್ಲಿ ಕಥೆ–ಚಿತ್ರಕಥೆ–ಸಂಭಾಷಣೆಗಾರರಾಗಿ ಚಿತ್ರರಂಗ ಪ್ರವೇಶಿಸಿ, 1995 ರಿಂದ ಸ್ವತಂತ್ರ ಚಿತ್ರನಿರ್ದೇಶಕರಾದರು.

* * *

ಇವರ ಮೊದಲ ಧಾರಾವಾಹಿ 'ಇಂಚರ' ದೂರದರ್ಶನದಿಂದ 1995 ರಲ್ಲಿ ಪ್ರಸಾರವಾಯಿತು. 'ಕಾಮನಬಿಲ್ಲು' ಮತ್ತು 'ಕಥೆಗಾರ' ಧಾರಾವಾಹಿಗಳು ಇವರಿಗೆ ಈ ಕ್ಷೇತ್ರದಲ್ಲಿ ಒಂದು ಸ್ಥಾನ ಕಲ್ಪಿಸಿಕೊಟ್ಟವು. 1998ರಲ್ಲಿ ಟಿ.ಎನ್.ಸೀತಾರಾಮ್ ಅವರೊಂದಿಗೆ ಸೇರಿ ಇವರು ನಿರ್ದೇಶಿಸಿದ 'ಮಾಯಾಮೃಗ'ವನ್ನು ಕನ್ನಡಿಗರು ಇಂದೂ ಮರೆತಿಲ್ಲ. ಮಾಸ್ತಿಯವರ 'ಸುಬ್ಬಣ್ಣ' ಕಿರುಕಾದಂಬರಿ ಆಧರಿಸಿದ ಧಾರಾವಾಹಿ ದೂರದರ್ಶನದಿಂದ ಪ್ರಸಾರವಾಗಿ ಅಪಾರ ಮೆಚ್ಚುಗೆ ಗಳಿಸಿತು. 'ಉಯ್ಯಾಲೆ', 'ಮೌನರಾಗ', 'ಸುಪ್ರಭಾತ', 'ಚಕ್ರತೀರ್ಥ' ಮತ್ತು 'ಸಾಕ್ಷಿ' ಇವರ ಯಶಸ್ವಿ ದೈನಂದಿನ ಧಾರಾವಾಹಿಗಳು. ಶೇಷಾದ್ರಿಯವರು 'ಕೈಲಾಸಂ', 'ದೇವುಡು', 'ಕೆಎಸ್‌ನ' 'ಎಎನ್.ಮೂರ್ತಿರಾವ್', 'ಚಿನ.ಮಂಗಳ', 'ಎಸ್‌ಎಲ್.ಭೈರಪ್ಪ' ಮುಂತಾದವರನ್ನು ಕುರಿತು ಅನೇಕ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ.

* * *

ಬೊಳುವಾರ ಮಹಮದ್ ಕುಂಞ' ಅವರ 'ಮುನ್ನುಡಿ' ಶೇಷಾದ್ರಿ ನಿರ್ದೇಶಿಸಿದ ಮೊದಲ ಚಲನಚಿತ್ರ. 2000 ದಲ್ಲಿ ಬೆಳ್ಳಿತೆರೆಗೆ ಬಂದ ಈ ಚಿತ್ರ ಮುಸ್ಲಿಂ ಸಂವೇದನೆಯ ಪ್ರಥಮ ಚಿತ್ರವೆನಿಸಿ ಕನ್ನಡ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲನ್ನೇ ಸ್ಥಾಪಿಸಿತು. ರಾಷ್ಟ್ರಮಟ್ಟದಲ್ಲಿ ಎರಡು, ರಾಜ್ಯದಲ್ಲಿ ಆರು ಪ್ರಶಸ್ತಿಗಳೊಂದಿಗೆ ಅಂತರಾಷ್ಟ್ರೀಯ ಮಟ್ಟದಲ್ಲೂ ಇದು ಸುದ್ದಿ ಮಾಡಿತು.ಮರು ವರ್ಷವೇ ಇವರು ನಿರ್ದೇಶಿಸಿದ 'ಅತಿಥಿ' ಚಿತ್ರಕ್ಕೆ ಮತ್ತೊಮ್ಮೆ ರಾಷ್ಟ್ರಪ್ರಶಸ್ತಿ ಬಂದು 'ಮುನ್ನುಡಿ'ಯ ಯಶಸ್ಸು ಆಕಸ್ಮಿಕವಲ್ಲ ಎಂಬುದನ್ನು ಸಾರಿತು. ಇವರ ಮೂರನೇ ಚಿತ್ರ 'ಬೇರು' 2004ರಲ್ಲಿ ಸಿದ್ಧವಾಗಿ ಮಗದೊಮ್ಮೆ ರಾಷ್ಟ್ರಪ್ರಶಸ್ತಿ ಪಡೆಯುವ ಮೂಲಕ, ಶೇಷಾದ್ರಿಯವರನ್ನು ಸತತವಾಗಿ ಮೂರು ಬಾರಿ ರಾಷ್ಟ್ರಪಶಸ್ತಿ ಪಡೆದ ಹ್ಯಾಟ್ರಿಕ್ ನಿರ್ದೇಶಕ ಎಂಬ ಕೀರ್ತಿತಂದಿತು.

ಇವರ ನಾಲ್ಕನೇ ಚಿತ್ರ– 'ತುತ್ತೂರಿ', ಐದನೇ ಚಿತ್ರ– 'ವಿಮುಕ್ತಿ', ಆರನೇ ಚಿತ್ರ– 'ಬೆಟ್ಟದಜೀವ', ಏಳನೇ ಚಿತ್ರ– 'ಭಾರತ್‌ಸ್ಟೋರ್ಸ್' ಹಾಗೂ ಎಂಟನೇ ಚಿತ್ರ 'ಡಿಸೆಂಬರ್–1' ಕೂಡ ರಾಷ್ಟ್ರಪ್ರಶಸ್ತಿಗಳನ್ನು ಪಡೆಯುವುದರೊಂದಿಗೆ ಸತತ ಎಂಟು ಬಾರಿ ರಾಷ್ಟ್ರಪ್ರಶಸ್ತಿ ಪಡೆದ ಭಾರತದ ಏಕೈಕ ನಿರ್ದೇಶಕ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. **2014** ರಲ್ಲಿ ಅತ್ಯುತ್ತಮ ಚಿತ್ರಕಥೆಗಾರ ರಾಷ್ಟ್ರಪ್ರಶಸ್ತಿ ಕೂಡ ದೊರೆತಿದೆ. ಇವರು, **2014** ರಲ್ಲಿ 'ವಿದಾಯ' **2016** ರಲ್ಲಿ 'ಬೇಟಿ' **2018** ರಲ್ಲಿ 'ಮೂಕಜ್ಜಿಯ ಕನಸುಗಳು' ಮತ್ತು **2019** ರಲ್ಲಿ ಮಹಾತ್ಮಗಾಂಧಿಯವರ ಬಾಲ್ಯವನ್ನು ಆಧರಿಸಿದ 'ಮೋಹನದಾಸ' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವರ ಚಿತ್ರಗಳು ಒಂದಲ್ಲ ಒಂದು ಗೌರವಕ್ಕೆ ಪಾತ್ರವಾಗಿವೆ. **2018** ರಲ್ಲಿ ಕರ್ನಾಟಕ ಸರ್ಕಾರವು ಇವರು ಚಲನಚಿತ್ರರಂಗಕ್ಕೆ ನೀಡಿದ ಸೇವೆಯನ್ನು ಗುರುತಿಸಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ನೀಡಿ ಜೀವಿತಾವಧಿ ಸಾಧನೆಯನ್ನು ಗೌರವಿಸಿದೆ.

---

**# 4609, Nandi Enclave, 2 Cross, BSK III Stage, III Phase, V Block,**
**BANGALORE – 560 085, INDIA (O) 080-42115715**, (C) **+ 91 9845075715** psheshadri@gmail.com
**www.psheshadri.com**